ಜಿ.ವೈ.ಹುಬ್ಳೀಕರ್
JNANA001749



G Y HUBLIKAR

ಕೋಟೆ ಕುಮಾರ್

# ಜಿ.ವೈ.ಹುಬ್ಳೀಕರ್

ಕರ್ನಾಟಕ ಲಲಿತಕಲಾ ಅಕಾಡೆಮಿ
Karnataka Lalitakala Academy

# ಜಿ.ವೈ. ಹುಬ್ಳೀಕರ್

(ಜೀವನ ಚರಿತ್ರೆ)

ಕೋಟೆ ಕುಮಾರ್

ಕರ್ನಾಟಕ ಲಲಿತ ಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೨

G.Y. HUBLIKAR - A biography by Kote Kumar, Tumkur. Published by V.N. Mallikarjuna Swamy, Registrar Karnataka Lalitkala Academy, Kannada Bhavana, J.C. Road, Bangalore-560 002. Tel.: 080-22480297

ಹಕ್ಕುಗಳು : © ಲೇಖಕರು

ಪುಟಗಳ ಸಂಖ್ಯೆ : 52

ಬೆಲೆ:ರೂ.70/-

ಪ್ರಧಾನ ಸಂಪಾದಕ : ವಿ.ಟಿ. ಕಾಳೆ

ಪ್ರಕಾಶಕರು :

ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ

ರಿಜಿಸ್ಟ್ರಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - 560 002

ದೂರವಾಣಿ : 080-22480297

ಮುಖಪುಟ ವಿನ್ಯಾಸ : ಭರತೇಶ್ ಯಾದವ್

ಆಂಗ್ಲ ಅನುವಾದ : ಆರ್. ಶಾಂತಮೂರ್ತಿ

ಮುದ್ರಣ

ರಶ್ಮಿಪ್ರಿಂಟ್ ಸರ್ವಿಸ್

ನಂ. 8, 1ನೇ ಅಡ್ಡರಸ್ತೆ

ಕಲಾಸಿಪಾಳ್ಯ ಹೊಸ ಬಡಾವಣೆ

ಬೆಂಗಳೂರು - 560 002

ದೂರವಾಣಿ : 9901916581

## ಅಧ್ಯಕ್ಷರ ನುಡಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಳೆದ ನಲವತ್ತುಮೂರು ವರುಷಗಳಿಂದ ಲಲಿತ ಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆ ಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರ ಕಲಾಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ ಕಲಾವಿದರ ಮಾಲೆ ಪುಸ್ತಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲೀಷ್ ಭಾಷೆಗೂ ಅನುವಾದಿಸಿ ಪ್ರಕಟಿಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನೂ ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕಟಿತ “ಜಿ. ವೈ. ಹುಬ್ಬಳ್ಳಿಕರೆ' ಪುಸ್ತಕವು ಅವರ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸುತ್ತದೆ. ಈ ಪುಸ್ತಕದ ಲೇಖಕರೂ ಸ್ವತಃ ಕಲಾವಿದರಾಗಿದ್ದು, ಪ್ರಸ್ತುತ ಕಲಾವಿದ ಜೀವನ, ಸಾಧನೆಗಳನ್ನು ಅರಿತವರಾಗಿದ್ದರಿಂದ ಈ ಕಲಾವಿದರ ಸಮಗ್ರ ಪರಿಚಯವು ಈ ಪುಸ್ತಕವು ಓದುಗರ ಗಮನಕ್ಕೆ ತರುತ್ತದೆ ಎಂದು ಭಾವಿಸಲಾಗಿದೆ.

ಈ ಮೊದಲು ಕಿರು ಅಳತೆಯಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸಕ್ತಗಳನ್ನು ಈಗ ದೊಡ್ಡ ಅಳತೆಯಲ್ಲಿ ಸಿದ್ಧಪಡಿಸಿ ಓದುಗರ ಕೈಗಿತ್ತಿದ್ದೇವೆ.

ಎಂದಿನಂತೆ ಕಲಾಸಕ್ತರು, ಕಲಾವಿದರು, ಕಲಾ ಇತಿಹಾಸ ಪ್ರೇಮಿಗಳು ಈ ಪುಸ್ತಕಗಳನ್ನು ಸ್ವಾಗತಿಸುತ್ತಾರೆಂದು ಆಶಿಸಲಾಗಿದೆ.

ಈ ಪುಸ್ತಕವನ್ನು ಮುದ್ರಿಸಿದ ರಶ್ಮಿ ಪ್ರಿಂಟ್ ಸರ್ವಿಸ್ ಅವರಿಗೂ ಪ್ರಕಟಿಸಿದ ಕರ್ನಾಟಕದ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅವರಿಗೂ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಬೆಂಗಳೂರು ವಿ.ಟಿ. ಕಾಳೆ

## ಮನದಾಳದಿಂದ

ಆತ್ಮೀಯರೆ,

ನಿರ್ದಿಷ್ಟ ಹಾಗೂ ವಿಭಿನ್ನವಾದ ಚಿಂತನ ಕ್ರಮವನ್ನು ಕಪ್ಪು ಮಸಿಯಿಂದ ಬಿಳಿ ಹಾಳೆಯ ಮೇಲೆ ಮನುಕುಲದ ಮನದ ಮಲಿನತೆಯನ್ನು ಸಮಾಜದ ಅಂಕು ಡೊಂಕುಗಳನ್ನು ವ್ಯಂಗ್ಯ ರೇಖೆಗಳ ಮೂಲಕ ಬುದ್ಧಿ ಹಾಗೂ ಮನಸ್ಸಿಗೆ ಕನ್ನಡಿ ಹಿಡಿದ ವ್ಯಂಗ್ಯ ಚಿತ್ರ ಇತಿಹಾಸದಲ್ಲಿ ಅದ್ವಿತೀಯ ಸಾಧನೆ ಮೆರೆದ ಸರಳ ಭಾವಜೀವಿ ಅಲ್ಲದೆ ಇವರ ರೇಖಾಚಿತ್ರ, ವರ್ಣಚಿತ್ರಗಳು ದೇಶ ವಿದೇಶಗಳಲ್ಲಿ ಪ್ರಖ್ಯಾತಿ ಪಡೆದಿವೆ. ಜಿ.ವೈ. ಹುಬ್ಳೀಕರ್‌ರವರು ಚಿತ್ರಕಲಾ ಕ್ಷೇತ್ರ ಕಂಡ ಅಪರೂಪದ ಕಲಾವಿದರು. ಹುಬ್ಳೀಕರ್ ಎನ್ನುವುದಕ್ಕಿಂತ "ಚಿಂಗಾರಿ'' ಎಂದರೆ ಕರ್ನಾಟಕದ ಜನಕ್ಕೆ ಪ್ರಜಾಮತ ಪತ್ರಿಕೆಯ ಚಿಂಗಾರಿ ತಟ್ಟನೆ ಕಾಣುತ್ತಾಳೆ ಸುಮಾರು ಎರಡು ದಶಕಗಳ ಕಾಲ ನಾಯಕಿಯ ರೂಪದಲ್ಲಿ ಮೆರೆದ ಇವರ 'ಚಿಂಗಾರಿ ಕಾಲಂ' ಮರೆಯಲಾಗದ ಇತಿಹಾಸ.

ಈ ಹಿರಿಯ ಕಲಾವಿದರ ಬಗ್ಗೆ ಬರೆಯುವಂತೆ ಲಲಿತಕಲಾ ಅಕಾಡೆಮಿಯು ತಿಳಿಸಿದಾಗ ಒಂದು ರೀತಿಯ ಭಯದಲ್ಲೇ ಒಪ್ಪಿದೆ. ಇವರ ಸಂದರ್ಶನಕ್ಕೆ ನಾನು ನನ್ನ ಗೆಳೆಯ ಆರ್. ಶಾಂತಮೂರ್ತಿ ಇವರ ಮನೆಗೆ ಹೋದಾಗ ದರ್ಬಾರಿನಲ್ಲಿ ಕುಳಿತ ಮೈಸೂರು ಒಡೆಯರ ಹಾಗೆ ದೊಡ್ಡ ಸೋಫಾದ ತುಂಬಾ ಕುಳಿತಿದ್ದ ಇವರನ್ನು ನೋಡಿ ಮತ್ತೂ ಭಯ ಭಕ್ತಿಗಳು ಕಾಡತೊಡಗಿದವು. ನಂತರ ಪರಿಚಯ, ನಗುಮುಖದ ಸ್ವಾಗತ, ಮುಗ್ಧತೆ, ಸರಳತೆ ಹಾಗೂ ಸ್ನೇಹಜೀವಿಯಾದ ಇವರ ಮಾತುಗಳು ನನ್ನ ಆತಂಕವನ್ನು ದೂರಮಾಡಿದವು. ಇವರ ಬದುಕು ವೃತ್ತಿ ಜೀವನದ

ಏಳುಬೀಳುಗಳು, ಸುದೀರ್ಘ ಜೀವನಾನುಭವದ ಮಾತುಗಳು ಕಲಾವಿದ ಸಹೃದಯರಿಗೆ ಒಂದು ಗಣಿಯಾಗಿತ್ತು. ಇವರ ಅನುಭವದ ಮೂಸೆಯಿಂದ ಕೆಲವೊಂದನ್ನು ಮಾತ್ರ ಇಲ್ಲಿ ದಾಖಲಿಸಲು ಸಾಧ್ಯವಾಗಿದೆ. ಸಹಕರಿಸಿದ ಈ ಮಹಾನ್ ಕಲಾವಿದ ದಂಪತಿಗಳಾದ ಜಿ.ವೈ. ಹುಬ್ಳೀಕರ್ ಹಾಗೂ ಇವರ ಶ್ರೀಮತಿ ಪದ್ಮಾರವರಿಗೆ ಅಭಿನಂದಿಸುತ್ತೇನೆ.

ಈ ಪ್ರಯತ್ನಕ್ಕೆ ಮುಖ್ಯವಾಗಿ ಲಲಿತಕಲಾ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಎಂ.ಬಿ. ಬಸವರಾಜು ಹಾಗೂ ಆಗಿನ ರಿಜಿಸ್ಟ್ರಾರ್ ಬಿ.ಟಿ. ಮುನಿರಾಜಯ್ಯರವರಿಗೆ ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರಿಗೂ ಅಭಾರಿಯಾಗಿದ್ದೇನೆ. ಇಂದಿನ ಅಧ್ಯಕ್ಷರಾದ ವಿ.ಟಿ. ತಾಳೆ ಹಾಗೂ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿಯವರಿಗೂ ಅಭಾರಿಯಾಗಿದ್ದೇನೆ. ಮಾಹಿತಿ ಸಹಕಾರ ನೀಡಿದ ಅಕಾಡೆಮಿಯ ವೆಂಕಟೇಶ್ ಹಾಗೂ ಸಿಬ್ಬಂದಿ ಮಿತ್ರರನ್ನು ನೆನೆಯುತ್ತೇನೆ. ಈ ನನ್ನ ಪ್ರಯತ್ನದಲ್ಲಿ ಜೊತೆಗಿದ್ದು, ಆಂಗ್ಲ ಭಾಷೆಗೆ ಭಾಷಾಂತರಿಸಿದ ನನ್ನ ಆತ್ಮೀಯ ಗೆಳೆಯ ಆರ್. ಶಾಂತಮೂರ್ತಿಯವರನ್ನು ಸಹ ನೆನೆಯುತ್ತೇನೆ.

ವಿಶೇಷವಾಗಿ ನನ್ನ ಬರವಣಿಗೆಗೆ ಪರೋಕ್ಷವಾಗಿ ಸಹಕರಿಸಿದ ಪ್ರೊ. ಹೆಚ್.ಜಿ. ಸಣ್ಣಗುಡ್ಡಯ್ಯ ಜಿ.ಎಸ್. ಸೋಮಶೇಖರ್ ಹಾಗೂ ಪ್ರೊ. ಬರಗೂರು ರಾಮಚಂದ್ರಪ್ಪನವರಿಗೂ ಸಹ ಅಭಾರಿಯಾಗಿದ್ದೇನೆ. ಮಹಾನ್ ಕಲಾವಿದರ ಈ ಕಿರುಪರಿಚಯವನ್ನು ಸಹೃದಯಿಗಳಾದ ನೀವು ಸ್ವೀಕರಿಸುತ್ತೀರೆಂದು ಆಶಿಸುತ್ತೇನೆ.

- ಕೋಟೆ ಕುಮಾರ್

**ಚಿತ್ರ ಕಲಾವಿದ ಜಿ.ವೈ.ಹುಬ್ಳೀಕರ್**

ಚಿತ್ರಕಲಾವಿದನಿಗೆ ಮೂಲಭೂತವಾಗಿ ರೇಖಾ ಪ್ರಧಾನತೆ ಅತಿ ಮುಖ್ಯ. ಮನುಷ್ಯನಿಗೆ ಬೆನ್ನೆಲುಬು ಎಷ್ಟು ಮುಖ್ಯವೋ ಹಾಗೆ ಚಿತ್ರಕಲೆಗೆ ರೇಖೆಗಳೇ ಮುಖ್ಯ. ರೇಖಾ ಲಾಲಿತ್ಯ ಬಲ್ಲವ ಉತ್ತಮ ಕಲಾವಿದನಾಗಬಲ್ಲ ಎನ್ನುವುದಕ್ಕೆ ಹುಕರರೇ ಸಾಕ್ಷಿ. ಯಾವುದೇ ಪ್ರಕಾರ ಇದ್ದರೂ ಸೃಷ್ಠಿಯ ರೂಪ ಅಮೂರ್ತವಿದ್ದರೂ ಬದುಕನ್ನ ನೋಡುವ ಬಗೆ ವಿಶಿಷ್ಟವಾಗಿರಬೇಕು. ಭಾವನೆಗಳನ್ನು ಹಲವು ಕಲೆಗಳ ಮೂಲಕ ಅಭಿವ್ಯಕ್ತಗೊಳಿಸಿದರೂ ಸೃಜನಶೀಲ ಅಭಿವ್ಯಕ್ತಿಗೆ ಹುಬ್ಬಿಕರ್ ಹಿಡಿದ ಮಾರ್ಗ ಬಣ್ಣ ಮತ್ತು ರೇಖೆ. ಇವರ ಕೃತಿಗಳಲ್ಲಿ ಸಾಮಾಜಿಕ ಹೊಣೆಗಾಲಕೆ, ಸೂಕ್ಷ್ಮ ಗ್ರಹಿಕೆ ಅಭಿವ್ಯಕ್ತಿಯ ವಿನ್ಯಾಸ, ವಿಶಿಷ್ಠ ಹಾಗೂ ಅನನ್ಯತೆಯನ್ನು ಕಾಣಬಹುದು. ಸಾಮಾನ್ಯ ವ್ಯಕ್ತಿಯ ಜೀವನವೇ ಇವರ ಕಲಾಕೃತಿಗಳಲ್ಲಿ ಮೂಡಿವೆ. ಹಾಗೆಯೇ ಹಾಸ್ಯ ರೇಖೆಗಳಲ್ಲಿ ತನ್ನ ಸಮಕಾಲೀನ ರಾಜಕೀಯ ದೌರ್ಬಲ್ಯಗಳನ್ನು ಸೆರೆಹಿಡಿದು ವ್ಯಂಗ್ಯ ವಿಡಂಬನೆಯ ಬಡಿಗೆಯಿಂದ ಭ್ರಷ್ಟ ರಾಜಕಾರಣಿಗಳನ್ನು

ಬಡಿದೆಚ್ಚರಿಸುತ್ತಾ ಜನಸಾಮಾನ್ಯರಲ್ಲಿ ಜಾಗೃತಿ ಉಂಟು ಮಾಡುತ್ತಾ ವ್ಯಂಗ್ಯ ಚಿತ್ರಕಲೆಯಲ್ಲಿ ರಾಜ್ಯಕ್ಕೆ ವಿಶೇಷ ಸ್ಥಾನ ತಂದುಕೊಟ್ಟ ಜಿ.ವೈ.ಹುಬ್ಬಿಕರ್ ಕರ್ನಾಟಕ ರಾಜ್ಯ ಕಂಡ ಅದ್ವಿತೀಯ, ಅಪ್ರತಿಮ ಚಿತ್ರಕಾರ.

## ಚಿರಪರಿಚಿತ

'ಪ್ರಜಾಮತ' ವಾರಪತ್ರಿಕೆಯಲ್ಲಿ 'ಚಿಂಗಾರಿ' ಶೀರ್ಷಿಕೆಯಲ್ಲಿ ಮೂಡಿ ಬಂದ ಇವರ ವ್ಯಂಗ್ಯಚಿತ್ರಗಳಿಂದ ಕರ್ನಾಟಕದ ಬಹುತೇಕ ಮನೆಗಳಲ್ಲಿ ಹುಬ್ಬಿಕರ್ ಈಗಲೂ ಚಿರಪರಿಚಿತ. ಚಿತ್ರಕಲೆ, ವ್ಯಂಗ್ಯ ಚಿತ್ರ, ಪತ್ರಿಕಾ ಮಾಧ್ಯಮ, ಚಿತ್ರರಂಗ, ಫೋಟೋಗ್ರಾಫಿ, ಕನ್ನಡ ಚಳುವಳಿ, ಕಲಾವಿದರ

ಸಂಘಟನೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ರಾಜ್ಯ ಮತ್ತು ರಾಷ್ಟ್ರಕ್ಕೆ ಕೀರ್ತಿ ತಂದುಕೊಟ್ಟ ಈ ಕಲಾವಿದ ಕರ್ನಾಟಕದ ಜೀವಂತ ದಂತಕಥೆ, ರಾಜಕೀಯ ವಿಡಂಬನೆಯ ವ್ಯಂಗ್ಯಚಿತ್ರಗಳನ್ನು ಕರ್ನಾಟಕದಲ್ಲಿ ಹುಟ್ಟುಹಾಕಿ, ಅದರಿಂದ ದಿನಪತ್ರಿಕೆ, ವಾರಪತ್ರಿಕೆಗಳಿಗೆ ವಿಶೇಷ ಆಕರ್ಷಣೆ ಹಾಗೂ ಲಾಭ ತಂದುಕೊಟ್ಟ ಮೊಟ್ಟಮೊದಲ ವ್ಯಂಗ್ಯಚಿತ್ರಕಾರ ಎಂಬ ಕೀರ್ತಿ ಹುಕರ್‌ರವರಿಗೆ ಸಲ್ಲುತ್ತದೆ.

ಖ್ಯಾತ ಕವಿ, ಕಲಾವಿದ, ಸ್ವತಂತ್ರ ಹೋರಾಟಗಾರರೊಡಗೂಡಿ ನೂರಾರು ಪುಣ್ಯ ಪುರುಷರಿಗೆ ಜನ್ಮ ನೀಡಿದ ಹುಬ್ಬಳ್ಳಿಯ ಅತ್ಯಂತ ಶ್ರೀಮಂತ ಕುಟುಂಬದಲ್ಲಿ ಶ್ರೀ ಯಲ್ಲಪ್ಪ ಮತ್ತು ಶ್ರೀಮತಿ ಬಸವಣ್ಣೆಪ್ಪ ದಂಪತಿಗಳ ಕುಟುಂಬವೂ ಒಂದು. ಹೊಲ-ಗದ್ದೆ, ಹಣ-ಅಸ್ತಿಗಳ ಜೊತೆ ದಾನ, ಧರ್ಮ, ಪರೋಪಕಾರಗಳಂತ ಧಾರ್ಮಿಕ ಮನೋಭಾವಗಳಿಂದ ಸಮೃದ್ಧವಾದ ಜಮೀನ್ದಾರ್ ಕುಟುಂಬ ಇವರದು. ಎರಡು ಗಂಡು, ಎಂದು ಹೆಣ್ಣು ಸೇರಿ ಒಟ್ಟು ಹತ್ತು ಮಕ್ಕಳ ತುಂಬು ಸಂಸಾರದಲ್ಲಿ ಕೊನೆಯ ಮಗನಾಗಿ ದಿನಾಂಕ 05-06-1941ರಲ್ಲಿ ಜನಿಸಿದ ಹುಬ್ಬಿಕರ್ ಅವರ ಪೂರ್ಣ ಹೆಸರು ಗುರುಸಿದ್ದಪ್ಪ ಯಲ್ಲಪ್ಪ ಹುಬ್ಬೀಕರ್.

## ಬಾಲ್ಯದ ನೆನಪು

ಕುಟುಂಬದಲ್ಲಿ ತುಂಬಿದ್ದ ಅನಕ್ಷರತೆಯಿಂದಾಗಿ ಬಾಲ್ಯದಲ್ಲಿ ಹುಕರ್‌ರವರಿಗೆ ಮಾರ್ಗದರ್ಶನದ ಕೊರತೆ ಕಾಡಿತ್ತು. ಹುಬ್ಬಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಭಾವನ ಜೊತೆ ಸಿಕಂದರಾಬಾದ್‌ನಲ್ಲಿ ಮಾಧ್ಯಮಿಕ ಶಿಕ್ಷಣ ಆರಂಭಿಸಿದರು. ಅಲ್ಲಿ ತೆಲುಗು ಮತ್ತು ಹಿಂದಿ ಭಾಷೆ ಕಲ್ತತರು. ಆದರೆ ನಾಲ್ಕೈದು ವರ್ಷಗಳಲ್ಲೇ ಮತ್ತೆ ಹುಬ್ಬಳ್ಳಿಗೆ ಹಿಂದಿರುಗಿ ವಿದ್ಯಾಭ್ಯಾಸ ಮುಂದುವರಿಸಲು ಭಾಷೆಯ ಭೂತ ಅಡ್ಡಿಪಡಿಸಿತು. ಇದಲಂದ ಬದುಕಿನ ಬಂಡಿ ಮುಂಬೈ ಸೇರಿತು. ಅಲ್ಲಿ ಸ್ಟುಡಿಯೋವೊಂದರಲ್ಲಿ ಸ್ಥಿರ ಛಾಯಾಗ್ರಾಹಕನಾಗಿ ವೃತ್ತಿ ಆರಂಭಿಸಬೇಕಾಯಿತು. ಬಿಡುವಿನ ವೇಳೆ

ಚಿತ್ರ ಬರೆಯುವ ಹವ್ಯಾಸ ಬೆಳೆಯಿತು. ಪೂರಕವಾಗಿ ಅಲ್ಲೋಲ್, ದಂಡಾವತಿ ಮಠ ಖ್ಯಾತ ಕಲಾಗುರುಗಳ ಒಡನಾಟ ದೊರೆಯಿತು. ಇದರಿಂದ ಚಿತ್ರಕಲೆಯಲ್ಲಿ



ಬದುಕು ಅರಸುವ ಗುಂಗು ಹಿಡಿಯಿತು. ಆದರೆ ಹುಬ್ಳೀಕರ್ರಲ್ಲಿದ್ದ ಕಲಾವಿದನನ್ನು ಹೊರತಂದಿದ್ದು ಮಾತ್ರ ಹುಬ್ಬಳ್ಳಿಯ ಕಲಾಮಂದಿರದ ಕಲಾಗುರು ಎಂ.ಬಿ.ಬಣಜಿಗಿಯವರ ಅಪಾರ ಪ್ರೀತಿ ತುಂಬಿದ ಸ್ಫೂರ್ತಿ ಹಾಗೂ ಪ್ರೋತ್ಸಾಹ. “ನನ್ನ ಬೆಂಗಾವಲಾಗಿ ನಿಂತು ಮಾರ್ಗದರ್ಶಕರಾಗಿ ಕಲಾಪ್ರಪಂಚದಲ್ಲಿ ನನ್ನನ್ನು ಮೇಲೇಲಿಸಿದ ನನ್ನ ಗುರು ಅಸಾಧಾರಣ ಕಲಾವಿದರಾದ ಎಂ.ಬಿ.ಬಣಜಿಗಿಯವರು ನಿತ್ಯ ಸ್ಮರಣೀಯರು” ಎಂಬ ಭಕ್ತಿಭಾವದಿಂದ ಹೃದಯ ತುಂಬಿ ಹೊಗಳುತ್ತಾರೆ. ಇವರ ಮಾರ್ಗದರ್ಶದ ಮೇರೆಗೆ ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಚಿತ್ರಕಲೆ ಹಾಗೂ ಪೈಂಟಿಂಗ್‌ನಲ್ಲಿ ಡಿಪ್ಲೋಮೋ.

**ಬದುಕಿಗಾಗಿ ಹುಡುಕಾಟ**

ಡಿಪ್ಲೋಮೋ ಮುಗಿಸಿದ ಹುಬ್ಬಿಕರ್ ಬದುಕಿನ ಅನ್ವೇಷಣೆ ಆರಂಭಿಸಿ, ಬಿಜಾಪುರದ ಲಲಿತಕಲಾ ಮಂದಿರದಲ್ಲಿ 1962ರಲ್ಲಿ ಪ್ರಾಂಶುಪಾಲರಾಗಿ ಸೇವೆ ಆರಂಭಿಸಿದರು. ಆದರೆ ಒಂದೇ ವರ್ಷಕ್ಕೆ ಬಿಜಾಪುರ ಬಿಟ್ಟು ಮುಂಬೈ ಮಹಾನಗರಿ ಪ್ರವೇಶಿಸಿದರು. ಅಲ್ಲಿ ಎಸ್.ಮುಖರ್ಜಿಯವರ **ಬಳಿ** ಕಲಾವಿದರಾಗಿ ಸೇಲ ಅನಂತರ ಖ್ಯಾತ ನಿರ್ದೇಶಕ ಮಹೇಶ್ ಕೌಲ್ ಜೊತೆ ಬಡ್ತಿ ಪಡೆದರು. ಆದರೆ ತಂದೆ, ತಾಯಿಗಳ ಆಶಯ ಹಾಗೂ ಗುರು ಮಿಣಜಿಗಿಯವರ ಒತ್ತಾಯದ ಮೇರೆಗೆ ಮತ್ತೆ ಹುಬ್ಬಳ್ಳಿಗೆ ಹಿಂದಿರುಗಿದರು. ಗುರುಗಳ ಬಲವಂತಕ್ಕೆ ಮಣಿದು 1963ರಲ್ಲಿ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಅಧ್ಯಾಪಕ ವೃತ್ತಿ ಹಿಡಿದರು. ಮೂರು ತಿಂಗಳು ಕಳೆಯುವಷ್ಟರಲ್ಲಿ ಪತ್ರಿಕಾ ರಂಗ ಕೈಬೀಸಿ ಕರೆಯಿತು. 1964ರಲ್ಲಿ ದಿ|| ನೆಟ್ಟಲ್ಲಪ್ಪನವರ ಒಡೆತನದಲ್ಲಿದ್ದ ಐ.ಎಸ್.ರಾಮಚಂದ್ರರಾವ್ ಸಂಪಾದಕತ್ವದ 'ಪ್ರಜಾವಾಣಿ' ಪತ್ರಿಕಾಲಯದಲ್ಲಿ ಒತ್ತಾಯದ ಮೇರೆಗೆ ದ್ವಿತೀಯ ಕಲಾವಿದನಾಗಿ ಸೇರ್ಪಡೆಯಾದರು. ಪತ್ರಿಕಾ ರಂಗ ಸೇರ್ಪಡೆ ಇವರ ಜೀವನದ ಪ್ರಮುಖ

ತಿರುವಾಗಿ ಅಲ್ಲಿಂದ ಹಿಂದಿರುಗಿ ನೋಡುವ ಪ್ರಸಂಗವೇ ಇಲ್ಲದಂತೆ ಬೆಳೆದರು. 'ಭೂ ಬಾಣ' ಖ್ಯಾತಿಯ ಐ.ಎಸ್.ಆರ್.ರವರ ಅಪೇಕ್ಷೆ, ಒತ್ತಾಯಗಳಿಗೆ ಸ್ಪಂದಿಸಿ 1967ರಲ್ಲಿ ಪ್ರಜಾವಾಣಿಯಲ್ಲಿ ಆರಂಭಿಸಿದ ರಾಜಕೀಯ ವಿಡಂಬನೆಯ 'ಚಿನಕುರುಳಿ' ಕಾಲಂ ಯಶಸ್ವಿ ಪ್ರಯೋಗವಾಗಿ ಅಪಾರ ಜನಮನ್ನಣೆ ಗಳಿಸಿತು. ಹಲವು ಪತ್ರಿಕೆಗಳಲ್ಲಿ ವ್ಯಂಗ್ಯ ಚಿತ್ರಗಳಿಗೆ ಪ್ರೇರಣೆಯಾಯಿತು. 'ಚಿನಕುರುಳಿ'ಯೊಂದಿಗೆ ಹುಕ ವ್ಯಂಗ್ಯಚಿತ್ರಕಾರರಾಗಿ ಅಪಾರ ಜನಮನ್ನಣೆ ಗಳಿಸಿದ ವೇಗ ಪತ್ರಿಕಾ ಬಳಗದಲ್ಲಿ ಹಲವರ ದ್ವೇಷ, ಅಸೂಯೆಗಳಿಗೆ ಕಾರಣವಾಯಿತು. ಇದರಿಂದಾಗಿ ಏಳು ವರ್ಷಗಳ 'ಚಿನಕುರುಳಿ' ಚಿನ್ನಾಟಕ್ಕೆ ಶರಣು ಹೇಳಿ 1972ರಲ್ಲಿ 'ಪ್ರಜಾಮತ' ವಾರಪತ್ರಿಕೆಯ ಒಡನಾಟ ಆರಂಭಿಸಿದರು. ಜನಪ್ರಿಯ 'ಚಿಂಗಾಲಿ' ಶೀರ್ಷಿಕೆಯಲ್ಲಿ ರಾಜಕೀಯ ವಿಡಂಬನೆಯ ವ್ಯಂಗ್ಯ ಚಿತ್ರಗಳು ಒಂದು ಪೂರ್ಣ ಪುಟದ ತುಂಬಾ ವಾರಪತ್ರಿಕೆಯೊಂದರಲ್ಲಿ ಬಿತ್ತರಗೊಂಡ ಪ್ರಥಮ ದಾಖಲೆ ಗೌರವ 'ಪ್ರಜಾಮತ' ಹಾಗೂ ಹುಕರ್ ಸಲ್ಲುತ್ತದೆ. ಹುಬ್ಳೀಕರ್ ಕುಂಚದಿಂದ ಮೂಡಿದ ತೀಕ್ಷ್ಣ ರಾಜಕೀಯ ವಿಡಂಬನಾತ್ಮಕ ವ್ಯಂಗ್ಯಚಿತ್ರಗಳು ಹಾಸ್ಯಮಿಶ್ರಿತ, ಕಟು ಸತ್ಯದ ಕಾರಣದಿಂದಾಗಿ ಕರ್ನಾಟಕದಾದ್ಯಂತ ಸೂಜಿಗಲ್ಲಿನಂತೆ ಓದುಗರನ್ನು ಆಕರ್ಷಿಸಿತು. ಮನೆಮನೆಯಲ್ಲಿ 'ಚಿಂಗಾಲ'ಯ ಅಭಿಮಾನಿಗಳು ಸೃಷ್ಠಿಯಾಗಿ ಕಾತುರದಿಂದ ವಾರ ವಾರವೂ ಅವಳ ಬರುವನ್ನು ನಿರೀಕ್ಷಿಸ ತೊಡಗಿದರು. 'ಚಿಂಗಾಲ' ಪುಟದಿಂದಲೇ ಪತ್ರಿಕೆಯ ಓದು ಅರಂಭಿಸುವಂತ ಅಭಿಮಾನಿಗಳು ಸೃಷ್ಟಿಯಾದರು. 'ಚಿಂಗಾಲ'ಯ ಚೆಲುವು, ವಯ್ಯಾರ, ಬೆಡುಗು, ಬಿನ್ನಾಣ, ಕಣ್ಣಿಂಚು ಮಾಡಿದ ಮೋಡಿ ಅದೆಂತಹ ಗಾರುಡಿ.

### ಚಿಂಗಾರಿ ಬ್ಯಾಗು

ಅಂಕೋಲದ ಮಹಿಳೆ ಪುಷ್ಪಲತಾ ಜಿ. ನಾಯಕ್‌ರವರು ತಮ್ಮ ಮದುವೆಯ ಸಮಯದಲ್ಲಿ ತಮ್ಮ ತಂದೆಯವರಿಗೆ 'ಚಿಂಗಾರಿ' ಬ್ಯಾಗು



ತಂದುಕೊಡಬೇಕೆಂದು ಹಠ ಹಿಡಿದು ತಲಸಿಕೊಂಡರಂತೆ. ಅಂದರೆ ಆಗ ಹುಕರ್‌ರವರ 'ಚಿಂಗಾಲ' ಚಿತ್ರ ಎಷ್ಟು ಜನಪ್ರಿಯ ಪ್ರಭಾವ ಬೀಲತ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಹೀಗೆ 1972ರಿಂದ 1990ರವರೆಗೆ 18 ವರ್ಷಗಳ ಕಾಲ ಸಾಗಿದ 'ಚಿಂಗಾಲಿ'ಯ ಒಡನಾಟಕ್ಕೆ 'ಪ್ರಜಾಮತ' ವಾರಪತ್ರಿಕೆ ನಿಂತುಹೋಗುವ ಸಂಭವದಿಂದಾಗಿ ಐದಾಯ ಅನಿವಾರ್ಯವಾಗಿತ್ತು. ಅಲ್ಲಿಂದ ಬದುಕಿನ ಬಂಡಿ ರಾಜಧಾನಿ ದೆಹಲಿ ಸೇಲಿತ್ತು, 1991ಲಂದ 1994ರವರೆಗೆ 'ಸನ್' ಮತ್ತು 'ಸಹರಾ' ಪತ್ರಿಕೆಗಳಲ್ಲಿ ಕಲಾವಿದರಾಗಿ ದುಡಿದು ರಾಷ್ಟ್ರ ಮಟ್ಟದ ಖ್ಯಾತಿ ಗಳಿಸಿದರು. ಆದರೆ ದೆಹಲಿಯ ಹವಾಮಾನ ಒಗ್ಗದೆ ಮತ್ತೆ ಬೆಂಗಳೂಲಿಗೆ ಮರು ಪಯಣ. ಮತ್ತೆ 'ಪ್ರಜಾವಾಣಿ' ಪತ್ರಿಕೆಯಲ್ಲಿ 1996ಲಂದ 2003ರವರೆಗೆ ದುಡಿದು ಸ್ವಯಂ ನಿವೃತ್ತಿ ಹೊಂದಿದರು.

## ದಾಂಪತ್ಯ

ಜಾತಿ, ಭಾಷೆ ಎಲ್ಲೆಗಳು ಕಲಾವಿದನಿಂದ ಬಲು ದೂರ. ಅದನ್ನು ನಂಬಿದ ಹುಕ ಮೈಸೂರಿನ ಪದ್ಮಾ ಅವರನ್ನು ಮೆಚ್ಚಿ ಬೆಂಗಳೂರಿನ ಆರ್ಯ ಸಮಾಜದಲ್ಲಿ 1967ರಲ್ಲಿ ಸಹಧರ್ಮಿಣಿಯಾಗಿ ಕೈಹಿಡಿದರು. ಪತ್ನಿ ಶ್ರೀಮತಿ ಪದ್ಮಾ ಹುಕರ್ ಬೆಂಗಳೂರಿನ ಕೆನ್ ಕಲಾಶಾಲೆಯ ವಿದ್ಯಾರ್ಥಿನಿ. ಮೈಸೂರು, ತಂಜಾವೂರು ಶೈಲಿಯ ಸಾಂಪ್ರದಾಯಿಕ ಕಲೆಯಲ್ಲಿ ಡಿಪ್ಲೋಮೋ ಪದವೀಧರೆ. ಖ್ಯಾತ ಕಲಾವಿದ ವೈ.ಸುಬ್ರಮಣ್ಯರಾಜುರವರ ಶಿಷ್ಯ. ಮಾಸಪತ್ರಿಕೆ 'ಗೃಹಶೋಭ'ದ ಸಹಸಂಪಾದಕಿಯಾಗಿ ಸೃಜನಶೀಲ ಬರಹಗಾರ್ತಿಯಾಗಿ, ಅನುವಾದಕಿಯಾಗಿ ಹಲವಾರು ಚಟುವಟಿಕೆಗಳಲ್ಲಿ ಈಗಲೂ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಅಪರೂಪದ ಪ್ರತಿಭಾನ್ವಿತೆ. ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿ, ಮಣಿಪಾಲ್ ಸೆಂಟರ್, ದೆಹಲಿಯ ಅಖಿಲ

ಭಾರತ ಫೈನ್ ಆರ್ಟ್ ಸೊಸೈಟಿಗಳಲ್ಲಿ ತಮ್ಮ ಸಾಂಪ್ರದಾಯಿಕ ಕಲಾಕೃತಿಗಳ ಪ್ರದರ್ಶನ ನಡೆಸಿರುವ ಈಕೆ ಹುಬ್ಬಿಕರ್ ಕಲಾವಿದನಿಗೆ ಅನುರೂಪದ ಜೋಡಿ. ಸೀಮಾ, ಹೇಮ್ ಹುಕ ದಂಪತಿಗಳ ಪ್ರೇಮಲತೆಯಲ್ಲಿ ಸಂತಸದ ಹೊನಲು ಹರಿಸಿದ ಸುಪುತ್ರಿಯರು. ಸೀಮಾ ಬಹುರಾಷ್ಟ್ರೀಯ ಬ್ಯಾಂಕ್‌ವೊಂದರಲ್ಲಿ ಮ್ಯಾನೇಜರ್ ಆದರೆ ಹೇಮ ಟೆಕ್ಸ್‌ಟೈಲ್ ಉದ್ಯಮಿ.

## ಸಾಧನೆಯ ಮೆಟ್ಟಿಲುಗಳು

"We Four" ನಾವು ನಾಲ್ವರು : ಹುಬ್ಳೀಕರ್‌ರವರ ವೃತ್ತಿಜೀವನದ ಪ್ರಮುಖ ಘಟನೆ ದಾಖಲಾಗಿದ್ದು, 1966ರಲ್ಲಿ ಚಿತ್ರಕಲೆಯ ಬೆಳವಣಿಗೆಯ ದೃಷ್ಠಿಯಿಂದಲೂ ಕರ್ನಾಟಕದ ಮಟ್ಟಿಗೆ ಅದೊಂದು ಮಹತ್ವದ ವರ್ಷ. ನವ್ಯ ಅಲೆಗಳ ಅಡಿಪಾಯದಿಂದ ನವನಿರ್ಮಾಣದ ಕನಸನ್ನು ಹೆತ್ತ ವರ್ಷ ಅದು. ರಾಷ್ಟ್ರ ಕಂಡ ಕಲಾದಿಗ್ಗಜಗಳಲ್ಲಿ ಆರ್.ಎಂ.ಹಡಪದ್, ಶಿವು ಮುನೋಳಿ, ಟಿ.ಕೆ.ಪಟೇಲ್ ಹಾಗೂ ಜಿ.ವೈ.ಹುಬ್ಳೀಕರ್ ಸೇಲಿ ಸ್ಥಾಪಿಸಿದ ಸಂಸ್ಥೆಯ "We Four" ಆಗಿನ ವಿಖ್ಯಾತ ಕಲಾ ವಿಮರ್ಶಕ ಜಿ.ವೆಂಕಟಾಚಲಂ ಅವರ ಪಲಚಯ ಪತ್ರ ಹಾಗೂ ನಾಮ ಬಲದಿಂದ ಈ ನಾಲ್ಕು ಮಂದಿಯ ಕಲಾಕೃತಿಗಳ ಪ್ರದರ್ಶನಕ್ಕೆ ಏರ್ಪಾಟು, ಬಲೀ ಆಹ್ವಾನ ಪತ್ರದ ಮೋಡಿಯಿಂದಲೇ ರಾಷ್ಟ್ರವ್ಯಾಪಿ ಪ್ರಚಾರ, ಅಪಾರ ಜನ ಮನ್ನಣೆ, ಸತತ ಮೂರು ವರ್ಷವೂ ಕಲಾಪ್ರದರ್ಶನಗಳು ನಡೆದವು. ಈ ತಂಡ 1968ರಲ್ಲಿ ದಿ!! ವೆಂಕಟಾಚಲಂರವರ ಗೌರವಾರ್ಥ ಮತ್ತೆ ಕಲಾಪ್ರದರ್ಶನ ಈ ರೀತಿ ನಾಲ್ಕು ಜನ ಪ್ರತಿಭಾನ್ವಿತ ಕಲಾವಿದರು ಒಟ್ಟುಗೂಡಿ ಇಂಥ ಪ್ರಯತ್ನಕ್ಕೆ ಕೈಹಾಕಿದ್ದು, ರಾಜ್ಯ ಕಲಾ ಚಟುವಟಿಕೆಗಳ ಇತಿಹಾಸದಲ್ಲೇ ಇದೇ ಮೊಟ್ಟ ಮೊದಲು. ಈ ತಂಡವು ದೇಶ ವಿದೇಶಗಳಲ್ಲಿ ಪ್ರದರ್ಶನ ನಡೆಸಿ ಉತ್ತುಂಗದಲ್ಲಿದ್ದಾಗಲೇ "We Four"ನ ಒಬ್ಬ ಸದಸ್ಯರು ಬೇರ್ಪಡೆಯಾಗಿ ಮತ್ತೆ ನಾಲ್ಕು ಕಲಾವಿದರು ಸೇಲ "We Four+Three" ಆಗಿ ಅನೇಕ ಯಶಸ್ವಿ ಕಲಾಪ್ರದರ್ಶನ ನಡೆಸಿದರು.

1971ರಲ್ಲಿ ಎಂ.ಎ.ಸಿ. ಮೈಸೂರು ಕಲಾಸಂಘ (ಮೈಸೂರ್ ಆರ್ಟ್ ಕೌನ್ಸಿಲ್) ಹೆಸರಿನಲ್ಲಿ 15 ಜನ ಕಲಾವಿದರ ಸಂಘ ಸ್ಥಾಪಿಸಿ, ಸಂಸ್ಥಾಪಕ ಅಧ್ಯಕ್ಷರಾಗಿ ಹುಬ್ಳೀಕರ್ ಹಲವಾರು ಯಶಸ್ವಿ ಚಿತ್ರಕಲಾ ಪ್ರದರ್ಶನ ನಡೆಸಿದ್ದಾರೆ. ಮಹಾತ್ಮ ಗಾಂಧೀಜಿಯವರ ವ್ಯಕ್ತಿತ್ವದಿಂದ ದರ್ಶನ' ಹೆಸರಿನಲ್ಲಿ ನಡೆಸಿದ ಆಕರ್ಷಿತರಾಗಿ ಹುಬ್ಬಿಕರ್ 'ಗಾಂಧೀ ರೇಖಾಚಿತ್ರಗಳ ಪ್ರದರ್ಶನವನ್ನು ಆಗಿನ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲ್ ವೀಕ್ಷಿಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಹುಬ್ಬಳ್ಳಿಯಲ್ಲಿ ನಡೆದ ಕಲಾಪ್ರದರ್ಶನವವನ, ಜ್ಞಾನಪೀಠ ಪುರಸ್ಕೃತರಾದ ದ.ರಾ.ಬೇಂದ್ರೆಯವರು ವೀಕ್ಷಿಸಿ ಮನಸಾರೆ ಹೊಗಳಿ ಸಂತಸ ವ್ಯಕ್ತಪಡಿಸಿದ್ದಾರೆ. ಬೆಂಗಳೂಲಿನಲ್ಲಿ ನಡೆದ 'ಕಲಾ ಮಹೋತ್ಸವ'ವನ್ನು ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆರವರು ಹಾಗೂ ಜೀವರಾಜ್ ಆಳ್ವ, ಇತ್ಯಾದಿ ವೀಕ್ಷಿಸಿ ಇವರ ಕಲಾಸಾಧನೆಯನ್ನು ಕೊಂಡಾಡಿದ್ದಾರೆ.

**ವಿದೇಶಕ್ಕೆ ಹುಬ್ಳೀಕರ್**

ಅಂತರಾಷ್ಟ್ರೀಯ ಪತ್ರಿಕೋದ್ಯಮ ಸಂಸ್ಥೆಯ ಆಹ್ವಾನದ ಮೇರೆಗೆ ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ನಿಯೋಗದಲ್ಲಿ ಒಬ್ಬರಾಗಿ 1987ರಲ್ಲಿ ಬರ್ಲಿನ್, ಫ್ರಾನ್ಸ್, ಬ್ರಿಟನ್, ಸ್ವಿಕ್ವರ್‌ಲ್ಯಾಂಡ್, ಹಾಲೆಂಡ್, ಬೆಲ್ಡಿಯಂ, ಪ್ಯಾಲೀಸ್ ಹಾಗೂ ಲಂಡನ್‌ಳಿಗೆ ಪ್ರವಾಸ ಕೈಗೊಂಡ ಹುಕರ್ ಅಲ್ಲಿನ ಜನರ ಶಿಸ್ತು, ಸಂಯಮ, ಬದ್ಧತೆ, ಜೀವನೋತ್ಸಾಹ, ಶುಚಿತ್ವ ಇತ್ಯಾದಿ ಗುಣಗಳಿಗೆ ಮಾರುಹೋಗಿದ್ದಾರೆ.

**ವಿದೇಶಕ್ಕೆ 'ಚಿಂಗಾರಿ'**

ಹುಬ್ಬಿಕರ್ ಅವರ ಕಲಾಕೌಶಲ್ಯಕ್ಕೆ ಸಾಕ್ಷಿ ಎಂಬಂತೆ 1972ರಲ್ಲಿ ಅಮೆಲಿಕಾ, ಟೆಕ್ಸಾಸ್, ರಷ್ಯಾಗಳ ಕಲಾ ಗ್ಯಾಲಲಿಯಲ್ಲಿ 'ಚಿಂಗಾಲ' ಪ್ರದರ್ಶನಗೊಂಡು ಜನಪ್ರಿಯತೆ ಪಡೆದಿದೆ. 1977ರಲ್ಲಿ ಬರ್ಲನ್‌ನಲ್ಲಿ World Cartoon Exhibition ನಡೆಸಿದ ಪ್ರದರ್ಶನ ಸ್ವಿಡರ್‌ಲ್ಯಾಂಡ್‌ನಲ್ಲಿ ನಡೆದ ವರ್ಲ್ಡ್ ಕಾರ್ಟೂನ್ ಎಕ್ಸಿಬಿಷನ್, ಕೆನಡಾದಲ್ಲಿ ನಡೆದ

ಪಾಪುಲೇಷನ್ ಆಫ್ ವರ್ಲ್ಡ್ ವಿಷಯದ ಪ್ರದರ್ಶನದಲ್ಲಿ ಇವರ ಕೃತಿಗಳು ಪ್ರದರ್ಶನಗೊಂಡಿದೆ. 1978ರಲ್ಲಿ ಬರ್ಚಿನ್ ಏರ್ಪಡಿಸಿದ್ದ Second Cartoon Exhibitionಗೆ ಹುಬ್ಬಿಕರ್ ಕಳುಹಿಸಿದ ವ್ಯಂಗ್ಯ ಚಿತ್ರಗಳು ನಿಗದಿತ ವೇಳೆಗೆ ಕೇವಲ ಒಂದು ಘಂಟೆ ತಡವಾಗಿ ತಲುಪಿದ್ದಕ್ಕೆ ಸ್ವೀಕೃತವಾಗದೆ ಹಿಂದಿರುಗಿಸಲ್ಪಟ್ಟಾಗ ಜರ್ಮನಿಯವರ ಸಮಯ ಪ್ರಜ್ಞೆ ಶಿಸ್ತು, ಕಟ್ಟುನಿಟ್ಟುಗಳನ್ನು ಮೆಚ್ಚುತ್ತಾರೆ.

## ಚಳುವಳಿಗಾರನಾಗಿ ಹುಬ್ಳೀಕರ್

ಕೇವಲ ರೇಖೆಗಳೊಂದಿಗೆ ಆಡುತ್ತಾ ಪರರ ದೋಷ ಹುಡುಕುವುದೇ ತನ್ನ ಬಹುದೊಡ್ಡ ಸೇವೆಯೆಂದು ಭಾವಿಸಿದ ವ್ಯಕ್ತಿ ಅಲ್ಲ ಇವರು. ಅಗತ್ಯವಿದ್ದಲ್ಲಿ ನಾಡಿಗಾಗಿ ಎಂತಹ ಹೋರಾಟಕ್ಕೂ ಸಿದ್ಧವಿದ್ದ ಗಂಡುಭೂಮಿಯ ಹುಕರ್ ಕನ್ನಡದ ಅಭಿಮಾನಿಯಾಗಿದ್ದರು. ಡಾ|| ಚಿದಾನಂದ ಮೂರ್ತಿಯವರೊಂದಿಗೆ ಕನ್ನಡ ಚಳುವಳಿ ಹೋರಾಟದಲ್ಲಿ ಮುಂಚೂಣಿಯಲ್ಲಿ ಭಾಗವಹಿಸಿ ಹಲವಾರು ಬಾಲ ಸೆರೆಮನೆ ಕಂಡ ಧೀರ. ಒಮ್ಮೆ ಚಿದಾನಂದಮೂರ್ತಿಯವರ ಜೊತೆ ಸೆರೆಮನೆಯಲ್ಲಿದ್ದಾಗ ಸೆರೆಮನೆಯ ಪೊಲೀಸ್ ಇವರಿಗೆ ವಂದಿಸಿ, ಊಟ-ತಿಂಡಿ ನೀಡಿ, ಸತ್ಕಲಿಸಿ ನಾನು ಚಿದಾನಂದ ಮೂರ್ತಿಯವರ ಶಿಷ್ಯನೆಂದು ತಿಳಿಸಿದ ವಿಶಿಷ್ಠ ಘಟನೆಯನ್ನು ಅಚ್ಚಹಸಿರಾಗಿ ಮನಃಪಟಲದಿಂದ ಹೊರತೆಗೆಯುತ್ತಾರೆ. ಪದೇ ಪದೇ ಸೆರೆಮನೆ ಸೇರುತ್ತಿದ್ದ ಈ ಜೋಡಿಯನ್ನು ಕಂಡರೆ ಸೆರೆಮನೆಯ ಅಧಿಕಾರಿಗೆ 'ಇವರು ಮತ್ಯಾಕೆ ವಕ್ಕಲಿಸಿಕೊಂಡರೋ' ಎಂದು ಬೇಸರವಾದರೆ, ಸೆರೆಮನೆಯ ಪೇದೆಯ ಸತ್ಕಾರಕ್ಕೆ ಮಾರುಹೋಗಿದ್ದ ಹುಕರ್ 'ಇಂಥ ಊಟ, ಸತ್ಕಾರ ಸಿಗುವಂತಿದ್ದರೆ ಮನೆಯೂ ಬೇಡ, ಬಿಡುಗಡೆಯೂ ಬೇಡ, ಹಾಯಾಗಿ ಇಲ್ಲೇ ಇದ್ದು ಬಿಡೋಣ' ಎನ್ನುತ್ತಿದ್ದರಂತೆ ಚಿದಾನಂದಮೂರ್ತಿಯವರಿಗೆ.



## ಹುಬ್ಳೀಕರ್ ದೃಷ್ಠಿಯಲ್ಲಿ ಇಂದಿನ ಕಲಾಶಿಕ್ಷಣ

ಎಸ್.ಎಸ್.ಎಲ್.ಸಿ. ಮೆಟ್ಟಿಲನ್ನೂ ಹತ್ತದೆ ಚಿತ್ರಕಲಾ ಶಿಕ್ಷಣದಲ್ಲಿ ಪ್ರಾಪ್ತಿ ಪಡೆದ ಹುಬ್ಬಿಕರ್ 'ಕಲೆ ದೇವರ ಕೊಡುಗೆ ಎನ್ನುವುದು ಶುದ್ಧ ಸುಳ್ಳು. ನಿರಂತರ ಪ್ರಯತ್ನ, ಬಹುಮುಖ್ಯ. ಜೊತೆಗೆ ಗುರುಬಿಲ್ಲದೆ ಕಲೆ ಕರಗತವಾಗದು' ಎನ್ನುತ್ತಾರೆ. 'ವಿದ್ಯಾರ್ಥಿ ವೇತನಕ್ಕಾಗಿ ಸಂದರ್ಶನಕ್ಕೆ ಬರುವ ಕಲಾ ವಿದ್ಯಾರ್ಥಿಗಳಿಗೆ ಕಲೆಯ ಕುಲಿತು ಕೇಳುವ ಸಾಧಾರಣ ಪ್ರಶ್ನೆಗಳಿಗೂ ಉತ್ತಲಿಸುವ ಜ್ಞಾನವಿಲ್ಲ. ಕನಿಷ್ಠ ಖ್ಯಾತ ಹಿಲಯ ಕಲಾವಿದರ ಹೆಸರನ್ನೂ ಕೇಳಿರುವುದಿಲ್ಲ' ಎಂದು ವಿಷಾಧ ವ್ಯಕ್ತಪಡಿಸುತ್ತಾರೆ. 'ನನ್ನ ವಿದ್ಯಾರ್ಥಿ ಜೀವನದ ಹಂತದಲ್ಲಿ ಕಲಾಕೃತಿ ನೋಡಿದ ತಕ್ಷಣ ಅದನ್ನು ರಚಿಸಿದ ಕಲಾವಿದನನ್ನು ಗುರ್ತಿಸಬಲ್ಲವನಾಗಿದ್ದೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ.

'ಹಿಂದೆ ಚಿತ್ರಕಲಾ ಪರೀಕ್ಷೆಗೆ ಕೂರಲು ವಿದ್ಯಾರ್ಥಿಯ ಕಲಾಕೃತಿಗಳನ್ನು ಮುಂಬೈನಲ್ಲಿ ಪರೀಕ್ಷಿಸಿ ಯೋಗ್ಯನೆಂದು ಪರಿಗಣಿಸಲ್ಪಟ್ಟರೆ ಮಾತ್ರ ಆತನಿಗೆ ಪರೀಕ್ಷೆಗೆ ಕೂರಲು ಅವಕಾಶ ದೊರೆಯುತ್ತಿತ್ತು. ಆದರೆ ಇಂದಿನ ವಿದ್ಯಾರ್ಥಿಗಳ ಆಯ್ಕೆ ಪಲೀಕ್ಷಾ ವಿಧಾನ, ಚಿತ್ರಕಲಾ ಶಾಲೆಗಳ ಪರಿಸ್ಥಿತಿಗಳು ಯೂರೋಪಿಯನ್ ಕಲಾಶಾಲೆಗಳಿಗೆ ಹೋಲಿಸಿದಾಗ ಅತ್ಯಂತ ಶೋಚನೀಯವಾಗಿವೆ' ಎಂದು ವ್ಯಥೆಪಡುತ್ತಾರೆ.

## ವ್ಯಂಗ್ಯ ಚಿತ್ರಗಾರನ ಇನ್ನೊಂದು ಮುಖ

ವ್ಯಂಗ್ಯಚಿತ್ರಕಾರನೆಂದೇ ಖ್ಯಾತವಾಗಿರುವ ಹುಬ್ಳೀಕರ್ ಉತ್ತಮ ಚಿತ್ರಗಾರ ಎಂಬುದು ಬಹಳ ಜನರಿಗೆ ಅಲವೇ ಇಲ್ಲ. ಮಯೂರ, ತುಷಾರ, ಸುಧಾ, ಕರ್ಮವೀರ, ಪ್ರಜಾಮತ ಇತ್ಯಾದಿ ವಾರಪತ್ರಿಕೆ ಹಾಗೂ ದಿನಪತ್ರಿಕೆಗಳಿಗೆ ಉತ್ಕೃಷ್ಟ ದರ್ಜೆಯ ಮುಖಪುಟಗಳನ್ನು ವಿನ್ಯಾಸಪಡಿಸಿ ಆ ಪತ್ರಿಕೆಗಳಿಗೆ ಆಕರ್ಷಣೆ ಮತ್ತು ಬೇಡಿಕೆಯನ್ನು ಹೆಚ್ಚಿಸಿದ್ದವು. ಇವರಿಂದ ವಿನ್ಯಾಸಗೊಂಡ ಮುಖಪುಟ ಹೊತ್ತ ಪತ್ರಿಕೆಗಳು ಮಾರುಕಟ್ಟೆಯಲ್ಲಿ



ಪ್ರಥಮವಾಗಿ ಮಾರಾಟವಾಗುತ್ತಿದ್ದವು. ಹಾಗೇ ಇವರ ಕಲಾಕೃತಿಗಳಾದ 'ಕಾರ್ಮಿಕ ಮಹಿಳೆ', 'ತಾಯಿ ಮತ್ತು ಮಗು', 'ಕುದುರೆ ಮತ್ತು ಮಹಿಳೆ' ಹೀಗೆ ಇವರ ವರ್ಣಚಿತ್ರಗಳು ನೋಡುಗರ ಬದುಕಿನ ಭಾಗವಾಗಿ ಗೋಚಲಿಸುವುದು ವಿಶೇಷತೆ. ಕಪ್ಪು, ಕೆಂಪು, ಹಸಿರು ವರ್ಣಗಳನ್ನು ತಮ್ಮ ಕಲಾಕೃತಿಗಳಲ್ಲಿ ಹೆಚ್ಚು ಬಳಸಿದ್ದು, ದೊಡ್ಡ ದೊಡ್ಡ ಹೊಳೆಯುವ ಕಣ್ಣುಗಳು ಮುಖಭಾವ, ವಿಶೇಷ ಸಂಯೋಜನೆಯಿಂದ ಕೂಡಿದೆ. ಕೃತಿಗಳು ನೈಜವಾಗಿ ಬಣ್ಣವನ್ನು ಗಾಢವಾಗಿ ಬಳಸಿ ಕೃತಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ರೇಖೆಗಳಲ್ಲೇ ಮನಸೂರೆ ಮಾಡುವಷ್ಟು ನೈಜತೆಯನ್ನು ಮೂಡಿಸುವ ಇವರು ಬಣ್ಣಗಳಲ್ಲಿ ಇನ್ನೂ ಅಲಾಜಾಲವಾಗಿ ಅಭಿವ್ಯಕ್ತಿಗೊಳಿಸಿದ್ದಾರೆ. ಜಲವರ್ಣ, ತೈಲವರ್ಣಗಳಲ್ಲಿ ಹೆಚ್ಚು ಕಲಾಕೃತಿಗಳನ್ನು ರಚಿಸಿದ್ದಾರೆ.

ವ್ಯಂಗ್ಯಚಿತ್ರಗಳಲ್ಲಿ ಕೆಲವೊಂದು ನಿರ್ಬಂಧಗಳಿದ್ದು, ವರ್ಣಚಿತ್ರ ಕಲೆಯಲ್ಲಿ ಮುಕ್ತವಾಗಿ ಕಲಾವಿದನ ಭಾವನೆಗಳನ್ನು ನೇರವಾಗಿ ಅಭಿವ್ಯಕ್ತಿಗೊಳಿಸಬಹುದು. ಇಲ್ಲಿ ಕಲಾವಿದ ಸರ್ವ ಸ್ವತಂತ್ರ. ಆದ್ದರಿಂದ ವರ್ಣ ಕಲಾಕೃತಿಗಳೇ ನನಗೆ ಹೆಚ್ಚು ಪ್ರಿಯವೆಂದು ತಿಳಿಸುತ್ತಾರೆ. ಇವರು ಬೆಳೆದ ವಾತಾವರಣ ವ್ಯಕ್ತಿಗಳಲ್ಲಿನ ವೇಷ-ಭೂಷಣಗಳು, ಹಿನ್ನೆಲೆ ಎಲ್ಲವೂ ನೈಜ ಅನುಭವವಾಗಿದ್ದು, ಕಲಾವಿದ ಬದುಕಿನ ಅನುಭವಗಳನ್ನು ಮನಮುಟ್ಟುವಂತೆ ರಚಿಸುವಲ್ಲಿ ಸಾಫಲ್ಯತೆ ಪಡೆದಿದ್ದಾರೆ. ಅದರಲ್ಲೂ ತಾಯಿ-ಮಗು ಸರಣಿಯ ಕಲಾಕೃತಿಗಳು, ತಾಯಿ ಮಗುವಿನ ಅನನ್ಯ ಸಂಬಂಧ, ಮಮತೆ, ಪ್ರೀತಿ, ಹೇಳಲು, ಬರೆಯಲು ಆಗದ ಸೂಕ್ಷ್ಮ ಅನುಭವಗಳನ್ನು ಅವರ ಕೃತಿಗಳಲ್ಲಿ ಕಾಣಬಹುದು.

ಇವರು ಪತ್ರಿಕೆ ಹಾಗೂ ನಿಯತಕಾಲಿಕೆಗಳಿಗೆ ತಮ್ಮದೇ ಆದ ವ್ಯಂಗ್ಯ ಚಿತ್ರಗಳನ್ನು ನೀಡಿದ್ದರೂ ಕಥೆ, ಕವನಗಳಿಗೆ ರಚಿಸುತ್ತಿದ್ದ ಕಥಾ ಸಂದರ್ಭ ಚಿತ್ರಗಳ ವರ್ಣಮಯವಾಗಿದ್ದು, ಎಲ್ಲವೂ ಒಂದೊಂದು ವಿಶಿಷ್ಟ ಕಲಾಕೃತಿಯ ಅನುಭವವನ್ನು ನೀಡುತ್ತಿದ್ದವು. ಪತ್ರಿಕೆಗಳ ಜೀವಕಳೆಯಾಗಿ ಓದುಗರ ಮನಮುಟ್ಟುವಲ್ಲಿ ಹುಕರ್‌ರವರ ಕಲಾಕೃತಿಗಳು ಗಮನ ಸೆಳೆಯುತ್ತಿದ್ದವು. ಸಾವಿರಾರು ಮುಖಪುಟ ಚಿತ್ರಗಳು, ಹೊಸ ಹೊಸ

ಶೈಲಿಯಲ್ಲಿ ಪ್ರಜಾಮತ, ಸುಧಾ, ಮಯೂರ, ಮಲ್ಲಿಗೆ, ತುಷಾರ, ಕಸ್ತೂರಿ, ಕಾದಂಬರಿ ಇನ್ನೂ ಅನೇಕ ಪತ್ರಿಕೆಗಳಲ್ಲಿ ರಾರಾಜಿಸಿವೆ. ಹೀಗೆ ರೇಖಾ ಚಿತ್ರವಿರಬಹುದು, ವರ್ಣ ಕಲಾಕೃತಿಗಳಾಗಿರಬಹುದು ತಮ್ಮದೇ ಶೈಲಿಯಲ್ಲಿ ಬೇರಾರೂ ಅನುಸರಿಸಲು ಸಾಧ್ಯವಾಗದಂತಹ ಕಲಾಕೃತಿಗಳಾಗಿದ್ದು, ವಿಶೇಷವಾಗಿವೆ.

## ವ್ಯಂಗ್ಯಚಿತ್ರ ಹಾಗೂ ಪತ್ರಿಕೋದ್ಯಮದ ಇಂದಿನ ಸ್ಥಾನಮಾನ

ವ್ಯಂಗ್ಯ ಚಿತ್ರಕಲೆ ಸಾಮಾಜಿಕ ಜಾಗೃತಿ ಮೂಡಿಸಿ ಸಮಾಜದ ಓರೆಕೋರೆಗಳನ್ನು ತಿದ್ದುವ ಪ್ರಬಲ ಮಾಧ್ಯಮ ಎಂದು ನಂಬಿರುವ ಹುಬ್ಳೀಕರ್ 'ಇಂದಿನ ಬಹಳಷ್ಟು ವ್ಯಂಗ್ಯ ಚಿತ್ರಕಾರರಲ್ಲಿ ಅಂತಹ ಅಲವೇ ಇಲ್ಲದೆ ವ್ಯಂಗ್ಯಚಿತ್ರಗಳಲ್ಲಿ ಸೃಜನಶೀಲತೆ, ಅಂತಃಸತ್ವ, ಚಲನಶಕ್ತಿ, ನಿಷ್ಠುರ ಸತ್ಯಗಳು ಕ್ಷೀಣಿಸಿ ವ್ಯಂಗ್ಯ ಚಿತ್ರಗಳೆಂದರೆ ಅಗ್ಗದ ಜೋಕುಗಳೆಂಬ ಮಟ್ಟ ತಲುಪಿವೆ. ಎಷ್ಟೋ ಪತ್ರಿಕಾಲಯದಲ್ಲಿ ಸಂಪಾದಕ ಹೆಸರಿಗಷ್ಟೇ ಇದ್ದರೆ ಕಾರನಿರ್ವಾಹಕ ಸಂಪಾದಕ ಬೇರೆಯೇ ಇರುತ್ತಾನೆ. ಆತನಿಗೆ ವ್ಯಂಗ್ಯ ಚಿತ್ರಗಳ ಅರ್ಥ, ಉದ್ದೇಶ, ಮಹತ್ವ, ಒಳ ಅಲವುಗಳ ಕನಿಷ್ಠ ಜ್ಞಾನವೂ ಇಲ್ಲದಿರುವುದು ಒಂದು ದುರಂತವಾದರೆ ವ್ಯಂಗ್ಯ ಚಿತ್ರ ಉಂಟು ಮಾಡಬಹುದಾದ ಸಾಮಾಜಿಕ ಸಂಚಲನೆ ಮತ್ತು ಪರಿಣಾಮಗಳನ್ನು ಎದುರಿಸಿ ನಿಲ್ಲುವ ಧೈರ್ಯವಿಲ್ಲದೆ ಸಮಾಜ ಸೇವೆ ಹೆಸರಲ್ಲಿ ಹೊಟ್ಟೆ ಹೊರೆಯುವ (ಹಣ ಗಳಿಸುವ) ಸೋಗಲಾಡಿತನ ಮತ್ತೊಂದು ದುರಂತವಾಗಿದೆ. ಪತ್ರಿಕೆಯ ಗುಣಮಟ್ಟ ಸಾಮಾಜಿಕ ಜವಾಬ್ದಾರಿ, ಇವರಿಗೆ ಒಳ್ಳೆಯ ಚಿತ್ರಕ್ಕಿಂತ ಒಳ್ಳೆಯ ಮಾರ್ಕೆಟ್ ಬೇಕು. ಒಳ್ಳೆಯ ಕಲಾವಿದನಿಗಿಂತ ಸುಲಭದ ಗ್ರಾಫಿಕ್ ಸಾಕು. ಸಂತೆ ಹೊತ್ತಿಗೆ ಮೂರು ಮೊಳ ನೇಯ್ದರೆ ಸಾಕೆಂಬ ಧೋರಣೆ ಆದ್ದರಿಂದಲೇ ಹಿಂದೆ ಪತ್ರಿಕೆಗಳು ನಡೆಯುತ್ತಿದ್ದವು, ಈಗ ಓಡುತ್ತಿವೆ. ಯಾವಾಗ ಮುಗ್ಗರಿಸುತ್ತವೋ...?' ಎಂದು ಹಾಸ್ಯಮಿಶ್ರಿತ ವಿಷಾದ ಸೂಚಿಸುತ್ತಾರೆ. ಇದೇ ವೇಳೆ ಕಂಪ್ಯೂಟರ್‌ಗಳು ಕಲಾ ಲೋಕ ಪ್ರವೇಶಿಸಿರುವುದರಿಂದ ಉಂಟಾಗುವ

ಗಂಭೀರ ಪಲಸ್ಥಿತಿಯ ಬಗ್ಗೆ ಚಿಂತಿಸುತ್ತಾ 'ನೈಜ ಚಿತ್ರಕಲೆ ಕಲಾಕಾರರನ್ನು ಕಡೆಗಣಿಸಿ ಗ್ರಾಫಿಕ್ ಕಲೆಗೆ ಜೋತು ಬಿದ್ದಿರುವುದು ಕಲಾಕ್ಷೇತ್ರದ ದುರಂತ' ಎಂದು ಆತಂಕ ವ್ಯಕ್ತಪಡಿಸುತ್ತಾರೆ.

## ಮಧ್ಯರಾತ್ರಿ ಬಂದ ಮುಖ್ಯಮಂತ್ರಿ

"ವ್ಯಂಗ್ಯಚಿತ್ರಗಳು ಸಮಾಜದಲ್ಲಿ ಹಲವೊಮ್ಮೆ ಅನಿರೀಕ್ಷಿತ ವಿಚಿತ್ರ ಸಂಚಲನೆ ಉಂಟು ಮಾಡುತ್ತವೆ. ಹಲವೊಮ್ಮೆ ಅಪಾಯಕಾಲಿಯೂ ಆಗಿರುತ್ತವೆ. ಉದಾಹರಣೆಗೆ ಒಮ್ಮೆ ನನ್ನ ವ್ಯಂಗ್ಯ ಚಿತ್ರದಿಂದ ಕುಪಿತಗೊಂಡ ರಾಜಕಾರಣಿಗಳು ನಿಯೋಜಿಸಿದ ತಂಡವೊಂದು ನನ್ನನ್ನು ಅಪರಾತ್ರಿಯಲ್ಲಿ ಹೋಟೆಲ್‌ವೊಂದರಲ್ಲಿ ಹತ್ಯೆಗೈಯಲು ಮಾಡಿದ ಪ್ರಯತ್ನದಲ್ಲಿ ಸುದೈವದಿಂದ ಬದುಕಿ ಬಂದಿದ್ದು, ಒಂದು ಪವಾಡವೇ ಸರಿ.

ಮತ್ತೊಮ್ಮೆ ರಾತ್ರಿ 12 ಗಂಟೆಯ ವೇಳೆ ಆಗಿನ ಮುಖ್ಯಮಂತ್ರಿ ದೇವರಾಜ ಅರಸ್‌ರವರು ನನ್ನ ಮನೆಗೆ ಬಂದು ಆ ದಿನ ಪ್ರಕಟಗೊಂಡ ವ್ಯಂಗ್ಯಚಿತ್ರಗಳನ್ನು ಮನಸಾರೆ ಹೊಗಳಿ ಅಭಿನಂದಿಸಿ ಹೋದರು" ಎಂದು ವ್ಯಂಗ್ಯಚಿತ್ರಗಳ ಸಂಚಲನೆಯ ಬಗ್ಗೆ ತಮ್ಮ ಸ್ವಂತ ಅನುಭವ ಹೇಳುತ್ತಾ ವ್ಯಂಗ್ಯ ಚಿತ್ರಕಾರರು ಎಲ್ಲೂ ಕಾನೂನಿನ ಪಲಧಿಗೆ ಸಿಕ್ಕಿಕೊಳ್ಳದಿರಿ ಎಂದು ಎಚ್ಚರಿಸುತ್ತಾರೆ.

## ದುಡಿಮೆ, ಗಳಿಕೆ

ಸರಳ, ನಿರಾಡಂಬರ, ನೇರ ಮಾತಿನ ಹುಕ ಎಂತಹ ಪಲಸ್ಥಿತಿಯಲ್ಲೂ ನಂಬಿದ ಧ್ಯೆಯವನ್ನು ಬಿಡದೆ ನಿಷ್ಠೆಯಿಂದ ಬದುಕಿದ ರಾಜಕೀಯ ಭ್ರಷ್ಟತೆಯ ಮೇಲೆ ತೀಕ್ಷ್ಣ ವ್ಯಂಗ್ಯ ರೇಖೆಯ ಛಾಟಿಯನ್ನು ಝುಳಪಿಸುತ್ತಾ ಕೊಂಕು ಮಾತಿನ ಶೂಲದಿಂದ ರಾಜಕೀಯ ದುಷ್ಟರನ್ನು ಚುಚ್ಚುತ್ತಾ ರಾಜಿಯ ಗೋಜೇ ಇಲ್ಲದೆ ನಿರ್ಭೀತರಾಗಿ ಸಾಗಿದ ಪರಿಣಾಮ 45 ವರ್ಷಗಳ ಸುದೀರ್ಘ ಸೇವೆಯಲ್ಲಿ ಸ್ವಂತಕ್ಕೆ ಗಳಿಸಿಟ್ಟಿದ್ದು ದೊಡ್ಡ ಸೊನ್ನೆ, ಆ ಕುಲಿತು ಕೇಳಿದರೆ "ಕೊಟ್ಟ ಸಂಬಳಕ್ಕೆ ನಿಷ್ಠೆಯಿಂದ

ದುಡಿಯುವುದರಲ್ಲೇ ಹಗಲು ಇರುಳಾಗಿ ಮಾಡಿಟ್ಟುಕೊಳ್ಳಲು ಸಮಯವೇ ಉಳಿಯುತ್ತಿರಲಿಲ್ಲ"   ಎಂಬ ಬೇಸರವಿಲ್ಲದ, ನಿಷ್ಕಲ್ಮಶ ಉತ್ತರ ನೀಡುತ್ತಾರೆ.

## ಸಾಧನೆಯಲ್ಲಿ ತೃಪ್ತಿ, ಅತೃಪ್ತಿ

45 ವರ್ಷಗಳ ವೃತ್ತಿ ಜೀವನದ ಸಾಧನೆ ತೃಪ್ತಿ ನೀಡಿದೆಯೇ? ಎಂದರೆ "ನನ್ನ ಕಲೆ ಶ್ರೀ ಸಾಮಾನ್ಯನನ್ನು ತಲುಪಿದೆ, ಈಗಲೂ ಜನ ಹುಬ್ಬಿಕರರನ್ನು ಸ್ಮರಿಸುತ್ತಾರೆ' ಎಂಬ ತೃಪ್ತಿ ಇದೆ. ಆದರೆ ಇಡೀ ನನ್ನ ಜೀವನದ ಕಲಾ ಸೇವೆಯಿಂದ ಒಬ್ಬ ರಾಜಕಾರಣಿಯಾಗಲೀ, ಒಬ್ಬ ಮಂತ್ರಿಯಾಗಲೀ ಪ್ರಾಮಾಣಿಕವಾಗಿ ಬದಲಾಗಲಿಲ್ಲವಲ್ಲವೆಂಬ ಅತೃಪ್ತಿ ಅರ್ಧ ರಾತ್ರಿಯ ನಿದ್ರೆಯನ್ನು ಕೆಡಿಸುತ್ತದೆ"   ಎಂದು ವಿಷಾದದ ನಗೆ ಚೆಲ್ಲುತ್ತಾರೆ.

## ಗುಡ್ ಬೈ

ಮತ್ತೆ ಪತ್ರಿಕಾ ರಂಗ ಪ್ರವೇಶಿಸುವ ಆಶಯವಿದೆಯೇ ? ಎಂದರೆ "ಇಲ್ಲ, ಸಾಕಷ್ಟು ದುಡಿದಿದ್ದೇನೆ. ನನ್ನ ನಿಬಂಧನೆಗಳಿಗೆ ಯಾರೂ ಒಪ್ಪುವುದಿಲ್ಲ, ನನಗೆ ಗುಲಾಮಗಿಲ ಒಗ್ಗುವುದಿಲ್ಲ. ಆದ್ದರಿಂದ ಹಿಂದಿರುಗುವ ಪ್ರಶ್ನೆಯೇ ಇಲ್ಲ. ಗುಡ್"   ಎಂದು ಮತ್ತೆ ಕುಂಚ ಹಿಡಿದು ಹೋಗುತ್ತಾರೆ.

13

## ಜಿ.ವೈ.ಹುಬ್ಬೀಕರ್ ಒಂದು ಕಿರು ನೋಟ

| | | |
|---|---|---|
| ಹೆಸರು | : | ಜಿ.ವೈ.ಹುಬ್ಬಿಕರ್ (ಗುರುಸಿದ್ದಪ್ಪ ಯಲ್ಲಪ್ಪ ಹುಬ್ಬೀಕರ್ |
| ಜನನ, ಸ್ಥಳ | : | 05-06-1941, ಹುಬ್ಬಳ್ಳಿ |
| ತಂದೆ – ತಾಯಿ | : | ಯಲ್ಲಪ್ಪ, ಬಸವಣ್ಣೆವ್ವ |
| ವಿದ್ಯಾಭ್ಯಾಸ | : | 1961, ಡಿಪ್ಲೋಮೋ ಇನ್ ಡ್ರಾಯಿಂಗ್ ಅಂಡ್ ಪೈಂಟಿಂಗ್ |
| | | ಕರ್ನಾಟಕದಲ್ಲಿ ಮತ್ತು ಜೆ.ಜೆ. ಸ್ಕೂಲ್ ಆಫ್ ಆರ್ಟ್, ಮುಂಬೈ. |
| ವೃತ್ತಿ ಜೀವನ | : | 1961, ಮುಂಬೈನ ಫಿಲ್ಮಾಲಯದಲ್ಲಿ |
| | | ಸೆಟ್ ಡಿಸೈನರ್ ಮತ್ತು ಸ್ಟಿಲ್ ಫೋಟೋಗ್ರಾಫರ್ |
| | | 1962, ಬಿಜಾಪುರದ ಲಲಿತಕಲಾ ಮಂದಿರದ ಪ್ರಾಂಶುಪಾಲರಾಗಿ ಸೇವೆ |

1963, ಮೈಸೂರಿನ ಜಯಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್‌ನಲ್ಲಿ ಉಪನ್ಯಾಸಕ ವೃತ್ತಿ

1971, ಪ್ರಜಾವಾಣಿ ಬಳಗಕ್ಕೆ ಚಿತ್ರಕಲಾವಿದರಾಗಿ ಸೇರ್ಪಡೆ

1972 ಲಂದ 1990 ಪ್ರಜಾಮತದಲ್ಲಿ ಕಲಾವಿದನಾಗಿ ಕಾರ್ಯನಿರ್ವಹಣೆ 'ಚಿಂಗಾಲಿ' ಕಾಲಂನಿಂದ ಪ್ರಖ್ಯಾತಿ.

1991 ಲಂದ 1994ರವರೆಗೆ ದೆಹಲಿಯಲ್ಲಿ 'ಸನ್' ಮತ್ತು

'ರಾಷ್ಟ್ರೀಯ ಸಹರಾ' ಪತ್ರಿಕೆಗಳಲ್ಲಿ ಕೆಲಸ

1996ರಿಂದ 2003 ಮತ್ತೆ ಪ್ರಜಾವಾಣಿ ಬಳಗದಲ್ಲಿ ಕಾರ್ಯ ನಿರ್ವಹಣೆ

ಕಲಾ ಪ್ರದರ್ಶನಗಳು : 1962ರಲ್ಲಿ ವೆಂಕಟಾಚಲಂ ಸ್ಮೃತಿಯಲ್ಲಿ ಪೈಂಟಿಂಗ್‌ಗಳ ಪ್ರದರ್ಶನ



1962ರಲ್ಲಿ ಗಾಂಧೀಜಿ ಶತಮಾನೋತ್ಸವದ ಸಂದರ್ಭದಲ್ಲಿ

ದೆಹಅಯಲ್ಲಿ ನಡೆದ ಅಂತರಾಷ್ಟ್ರೀಯ ಪ್ರದರ್ಶನದಲ್ಲಿ

ಗಾಂಧೀಜಿ ಜೀವನ ಬಿಂಬಿಸುವ ಚಿತ್ರಗಳ ಪ್ರದರ್ಶನ

1970ರಲ್ಲಿ ತಾಜ್‌ಮಹಲ್ ಹೋಟೆಲ್, ಮುಂಬೈ

ಪೀಟರ್ ಲೂಯಿಸ್, ಜಸ್ಸು ರಾವೆಲ್ ಜೊತೆಯಾಗಿ ಪ್ರದರ್ಶನ

1973 ಇಂಡೋಸೋವಿಯೆಟ್ ಕಲ್ಚರಲ್ ಸೊಸೈಟಿ, ಬೈಲೋ, ರಷ್ಯಾ ಮತ್ತು

ಮಾಸ್ಕೋದಲ್ಲಿ ಆಯೋಜಿಸಿದ್ದ ಕರ್ನಾಟಕ ಕಲಾವಿದರ ಚಿತ್ರ ಪ್ರದರ್ಶನದಲ್ಲಿ ಭಾಗವಹಿಸುವಿಕೆ.

1973ರಲ್ಲಿ ಆಲ್ ಇಂಡಿಯಾ ಕಾರ್ಟೂನ್ ಕಾನ್ಸರೆನ್ಸ್‌ನಲ್ಲಿ ಚಿತ್ರಪ್ರದರ್ಶನ

1974ರಲ್ಲಿ ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ವ್ಯಂಗ್ಯಚಿತ್ರ ಪ್ರದರ್ಶನದಲ್ಲಿ ಚಿತ್ರಗಳ ಪ್ರದರ್ಶನ

1981ರಲ್ಲಿ ಕಳ್ಳಭಟ್ಟಿ ದುರಂತ ಕುರಿತು ಬೆಂಗಳೂರಿನಲ್ಲಿ

ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ.

1987ರಲ್ಲಿ ಬರ್ಲಿನ್ ಪ್ಯಾಲಿಸ್‌ನಲ್ಲಿ ವ್ಯಂಗ್ಯಚಿತ್ರ ಪ್ರದರ್ಶನ

ಪ್ರಶಸ್ತಿ, ಗೌರವಗಳು : 1961, 1966, 1969 ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ

1966ರಲ್ಲಿ "We Four" ಕಲಾ ಗುಂಪಿನ ಸ್ಥಾಪಕ ಸದಸ್ಯ

1975 ಹಾಗೂ 1982ರಲ್ಲಿ ದಾವಣಗೆರೆಯ ಸರ್ಕಾರಿ ಸ್ಕೂಲ್ ಆಫ್

ಆರ್ಟ್ ಅಂಡ್ ಕ್ರಾಫ್ಟ್‌ಗೆ ವಿಸಿಟಿಂಗ್ ಪ್ರೊಫೆಸರ್ ಆಗಿ ನೇಮಕ

1980ರಲ್ಲಿ ಕರ್ನಾಟಕ ಕಲಾ ಮೇಳದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಣೆ 1989ರ ಕಲಾ ಮಹೋತ್ಸವದ ಛೇರಮನ್ ಆಗಿ ಕಾರ್ಯನಿರ್ವಹಣೆ 1978ರಿಂದ 1984ರವರೆಗೆ ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ



ಸ್ಥಾಪಕ ಪ್ರಥಮ ಅಧ್ಯಕ್ಷರಾಗಿ ಗುಲ್ಬರ್ಗ, ಬೆಂಗಳೂರುಗಳಲ್ಲಿ ಯಶಸ್ವಿ ಸಮ್ಮೇಳನ ನಡೆಸಿದ ಹೆಗ್ಗಳಿಕೆ

1981ರ ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನದ ಕಲೆ ಮತ್ತು ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಸ್ಥಾನ

1981ರಲ್ಲಿ ವ್ಯಂಗ್ಯಚಿತ್ರಕಾರರ ಸಂಘದಿಂದ ಸನ್ಮಾನ

1987ರಲ್ಲಿ ಜರ್ಮನಿ, ಸ್ವಿಡ್ಜರ್‌ಲ್ಯಾಂಡ್, ಲಂಡನ್, ಪ್ಯಾಲೀಸ್ ಮುಂತಾದ ಯೂರೋಪಿಯನ್ ರಾಷ್ಟ್ರಗಳಿಗೆ ಆಹ್ವಾನದ ಚಿತ್ರಪ್ರದರ್ಶನ

ಎರಡು ಅವಧಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಸದಸ್ಯತ್ವ 1992ರಲ್ಲಿ ಲಲಿತಕಲಾ ಅಕಾಡೆಮಿ ಗೌರವ ಪುರಸ್ಕಾರ

2003ರಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ

2003ರಲ್ಲಿ ಪ್ರೆಸ್ ಅಕಾಡೆಮಿಯ ಗೌರವ ಪ್ರಶಸ್ತಿ

ಕುಟುಂಬ : ಪತ್ನಿ ಪದ್ಮಾಹುಬ್ಳೀಕರ್

ಗೃಹಶೋಭಾ ಮಾಸಪತ್ರಿಕೆಯಲ್ಲಿ ಸಹಸಂಪಾದಕಿ ಅನುವಾದ, ಸೃಜನಶೀಲ ಬರವಣಿಗೆ ಮತ್ತು ತೋಟಗಾಲಿಕಾ ಕಲೆಗಳಲ್ಲಿ ಪಣತಿ ಹಾಗೂ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಪರಿಣತಿ

ಮಕ್ಕಳು ಸೀಮಾ

ಬಹುರಾಷ್ಟ್ರೀಯ ಬ್ಯಾಂಕೊಂದರಲ್ಲಿ ಮ್ಯಾನೇಜರ್ ಇವರ ಪತಿ ಪ್ರಿಂಟಿಂಗ್ ಮತ್ತು ಕಾಂಟ್ರಾಕ್ಟ್ ಉದ್ಯಮಿ

ಹೇಮಾ


ಟೆಕ್ಸ್‌ಟೈಲ್ ಉದ್ಯಮಿ ಇವರ ಪತಿ ಆಟೋಮೊಬೈಲ್ ಉದ್ಯಮಿ ಇವರ ಪತಿ ಆಟೋಮೊಬೈಲ್ ಉದ್ಯಮಿ ಮೊಮ್ಮಗ ಆದಿತ್ಯ ಭಾರದ್ವಾಜ್

**- ಕೋಟೆಕುಮಾರ್**


















# WE

INVITES YOU

# FOUR

EXHIBITION TO BE INAUGURATED BY Dr. DAVID MALLORY THORPE, UNIVERSITY OF TENNESSEE, U.S.A.I.D.

Patel



Munoli





Hublikar



Hadapad

# THAKOR

## THAKOR K. PATEL



Born 1932 in Gujarat. Studied Painting and Applied Arts at Sir J. J. School of Arts, Bombay. Got a First Class Diploma and Fellowship in 1958. Won the Travelling Scholarship of the Art Society of India in 1954. Won Prizes Bombay Art Society. Painting purchased by the National (Lalitkala) Akadami in 1960. Private Collection in India and Abroad (Italy and England). Participated in Bombay Art Society, Gujarat State, Maharashtra State and Mysore State Art exhibitions.

At present Working as a Creative Art Designer in Weavers' Service Centre, All India Handloom Board, Government of India, Bangalore. Worked in Bombay, Calcutta and Banaras.

# SHIV

## SHIVARUDRAPPA S. MUNOLI



Born 1941, Wagadri (Bombay State) Studied under Shri N. S. Bendre and K. G. Subramanian. Obtained B.A. Degree in Fine Arts (Painting and Graphics) Participated in Gujarat State and Mysore State Exhibitions. Worked with Shri Jyoti Bhatt for Air India Mural (Colaj Medium). Some Private Collections.

At present Working as a Creative Art Designer in Weavers' Service Centre, All India Handloom Board, Government of India, Bangalore.

# HUBLIKAR

## G. Y. HUBLIKAR



Born in Hubli. Passed Diploma in Fine Arts in 1960. Worked as Principal of the School of Art, Bijapur and in Bombay Film Industry. Was the member of "The Committee for Selection and Purchase of Art objects for Government Museums in the State." Won the State Academy Prizes in 1961 and 1966.

At present Working in Deccan Herald, Prajavani, Sudha, Bangalore.

# RUDRAPPA

## R. M. HADAPAD



Born at Badami in 1929. Studied Painting at Hubli. Obtained Diploma from Sir J. J. School of Art Bombay 1957 Passed A.M. from Government of Mysore in 1961. Won the State Academy Prizes in the Year 1964, 1965, 1966.

One man Show in the Year 1953 at Bangalore. At present Working as a Superintendent in Fine Arts School, Bangalore.





























ಕಸ್ತೂರಿ
ಬೆಲೆ
ರೂ.೧



ಮಯೂರ
1968






ಸುಧಾ
ಯುಗಾದಿ 1980
POWER




ವಿ-ಪ್ರಯೋಗ


ತುಷಾರ
ಮಿನಿ ಕಾದಂಬರಿ

**Translated By-**

**R. Shantha Murthy**

## 'The living Legend'

Among the most important Artists of Karnataka Sri G.Y. Hublikar is one who is totally different and rare personality due to his extraordinary and unique line works. He is a living legend of Karnataka because of his complex personality shaped in different fields such as painting, Cartoon, Journalism, film field, still photography, Kannada movement, Artist's organization and so on. But still he preferred the coloures and lines for his creative expression in which we can see the social responsibility, voice for justice, and passion for the common people.



Mr. Hublikar is the pioneer to begin political satire cartoons in Karnataka which disturbed the sleep of many disgusted politicians as a nightmare. By the powerful enchanting critic lines in his cartoons he is crowned as the king of cartoons in Karnataka. He reached the nooks and corners of Karnataka by his cartoons published under the title Chingaari in Prajamatha Weekly.

**At the Early age:**

Land lord Sri Yellappa & Smt. Basavannemma couple belong to one of the richest families of Hubli in which Mr. Hublikar took his birth on 5th June 1941 as the 10th and last child. Sri Gurusiddappa Yellappa Hublikar is his full name but is familiar as Hublikar.

Due to illiteracy and lack of guidance in the home Hublikar was not able to complete his secondary education. Just after his middle school education in Secandrabad, where he learnt Hindi & Telugu languages he went to Mumbai to start his career as a still photographer. In the leisure times he practiced drawing. The contact of the Art Teachers Sri Alamelkar and Sri Dandavathi mutt developed his taste of drawing as a hobby. There after under the touch of Sri M.V. Minajigi the art teacher at Hubli Kala mandir, Hublikar blossomed as an artist. He considers Sri Minajigi as great artist and his Kalaguru, in fact his Godfather

whose affection and guidance remembered for ever. Under his guidance only he completed Diploma in Drawing and painting securing II Rank in Karnataka and J.J. School of Art Mumbai.

**Search for life:**

After his Diploma Hublikar began his career as the principal of Lalitha Kala Mandir at Bijapur in 1962. After one year he came to Mumbai to work as an assistant under S. Mukharjee. There after he was promoted as Director of Art by Mahesh kaul the famous Director. But the force of family and pressure of Sri Minajigi took him back to Hubli. In 1963 under the guidance of Sri Minajigi he joined as a Lecturer in Sri Jayachamarajendra Polytechnic at Mysore. But the very next year in 1964 he met the big turning point of his life when he joined Prajavani as a Artist, that too forcefully and never turned back their after. The owner Sri Nettakallappa and Sri T.S. Ramachandra Rao the editor of Prajavani by that time encouraged him with greater love and affection. It was by the encouragement of Sri. T.S.R. in 1967 Hublikar put the historical step by beginning chinakurali column in Prajavani in which he wrote political satire cartoons which was a new experiment in Karnataka journalism. Chinakurali made big hit creating new wave in the state which gave rapid publicity and popularity to Hublikar. This was intolerable to some of his fellow workers. That ended his



seven years of relationship with Prajavani and took him to Prajamatha Weekly in 1972. Prajamatha reserved a full page for his political punching cartoons under the title Chingari which met super success. The ignorance, negligence, irresponsibility of the politicians in solving public problems, corruption, dictatorship, and all other political slag being the subject of his work, the intense critic lines with humor created fans for both Prajamatha and Hublikar all over Karnataka. In fact Chingari took Hublikar to the peak of popularity while it was the trump card for Prajamatha. Even today people remember and recognise Hublikar by Chingari only.

**Chingari's Glamor:**

The beauty, the vanity, style, dress mode, the glittering eyes and even the bag in her hand all together gave a special effect to Chingari's figure which permanently fixed in the minds and hearts of the readers. Such was his line work that none could imitate him.

**Chingari's Bag:**

Pushpalatha from Ankola, who is now working as a High School Teacher in Tumkur says that she had wept and demanded her father to get Chingari's bag at her marriage time. This example witness the popularity of Chingari and the effect of Hublikars Line Work.



**Chingari's End:**

18 years of Chingari's splendour (1972-1990) met its end as the magazine itself was at its end. So Hublikar left Prajamatha at its ending time and came to Delhi to join SUN & SAHARA News papers as an Artist. He worked there from 1991-94 and got National level recognition. But the weather at Delhi was not friendly to him. Due to health problem he came back to Bangalore and rejoined Prajavani to play his second innings from 1996-2003 after which he took voluntary retirement.

**Made for each other:**

Caste, Language and territories are nothing to do with an artist. Accordingly Mr. Hublikar in 1967 married Ms. Padma of Mysore. Mrs. Padma Hublicar was a student of Ken School of Art Bangalore who is a Diploma Graduate in Traditional Painting of Mysore and Tanjaore style. She was the disciple of Artist Sri. Y. Subramanyaraju. Mrs. Hublikar is rare talented lady who is engaged in creative writing, translation, gardening etc. She is the sub editor of Gruha Shobha magazine also. She has exhibited her traditional paintings in Venkatappa Art Gallery, Manipal Center Bangalore and in All India Fine Art Society, Delhi. No doubt Mr. and Mrs. Hublikar couple are made for each other.

Seema and Hema are the two daughters of Hublikar couple. While Seema is a Manager in one of

the multinational banks, Hema is a Textile Industrialist. Aditya Bhardwaj is the grand son.

**Stepping on the Ladder of success:**

The year 1966 is the most important time in Hublikar's life and also important in the development of Art in Karnataka. The great Artists R.M. Hadapad, Shiva munoli, T.K. Patel along with Mr. Hublikar grouped together to form the Art group 'WE FOUR' which is a milestone in Hublikars life and a land mark in the history of Karnataka Art Development. We four provided a base for the creative dreams of new wave and led Karnataka to grow to new heights in the field of drawing and painting. The works exhibited by we four with the help and recommendation of Sri G. Venkatachalam the great Art critic got tremendous publicity and public praise throughout the nation as it was the first group work in Art field of Karnataka. Again in 1968 'we four' conducted the exhibition in memory of Late Sri. Venkatachalam. After sometime with some omission and addition of artists 'we four' became 'we four+three' and continued the successful exhibition.

In 1971 Hublikar being the founder president established the Mysore Art Council (MAC) with 15 Artists and organized some popular exhibitions. Mr. Virendra Pateel the Chief Minister of that time witnessing the Gandhi Darshan Exhibition at



Bangalore appreciated the successful effort of Hublikar in spreading the message of Gandhiji in Line works. The star poet Dr. D.R. Bendre was extremely delighted by visiting the art exhibition at Hubli and praised Hublikars works a lot. The Kala Mahothsava at Bangalore was another successful programme witnessed by the Chief Minister Sri. Ramakrishna Hegde, Jeevaraj Alva and other important personalities of that time.

**Chingari to Abroad:**

The popular exhibitions of Chingari at America, Texas and Russian Galleries in 1972 is the witness for Hublikar's Mastery of Art. His works were exhibited in the World Cartoon exhibition at Switzerland in 1977 and also at Canada in Population of world exhibition. In 1978 his Cartoons sent for Berlin Press Club exhibition were rejected as they reached the exhibition committee just one hour late to the scheduled time. Responding to this Hublikar admires the time sense and administration of Germans.

**Hublikar to Abroad:**

Mr. Hublikar got the opportunity to go abroad in 1987 as one among the Indian Journalists Association delegates being invited by the International Journalists

Institution. He visited Berlin, France, Switzerland, Holland, Belgium, Paris and London while he was totally attracted by the discipline, neatness, time sense, will of work and enthusiasm of life among the Western people.

**Hublikar in Kannada Movement:**

Hublikar never believed that just playing with lines and colours and to criticize others only as his grate service to society. Born on the hard soil of Hubli, which gave birth to grate poets, freedom fighters, artists and so many star personalities Hublikar has grate Love for Kannada. He is ready to take any risk for the sake of his Mother Land. It is witnessed while he along with Sri. Chidanandmurthy took the key role in Kannada Movement enjoying imprisonment many times. Relating to this he recalls from memory a special incident saying "Once while in the prison surprisingly a police constable of the prison saluted us and treated with good food and other requirements saying he was a Student of Sri. Chidanandamuthy. This incident is still very fresh in my memory". While the Jailer was disastered to see their repeated imprisonment, Hublikar being fascinated by the treatment of the police constable told to Sri. Chidanandamurthy "I prefer to stay in the prison instead of going out, if such food and treatment is available here."



**Art Education in Hublikar's View:**

Hublikar who attained efficiency in Drawing and Painting without passing SSLC., says “It is untrue to say Art is God Gift. Continuous effort is the key to achieve Art and with out a Guru one can't use that key".

"The art Students who attend the interviews expecting the Academy Scholarships are least aware of the Art Field. They can't answer to the simple questions relating to Art field. Even they never heard the names of the famous and familiar Artists. I am proud that at my student life I was capable to recognize the artist just seeing the painting at the first sight. At my time the Art students were allowed to take Exam if only their paintings ware considered to be worth after examined at Bombay. But the present condition of Art Education, selection of students, the examination system and the condition of the Art Schools all are in pitiable condition when compared to the Euro Schools of Art.

**Other face of the Cartoonist:**

People well recognise Hublikar as a Cartoonist but ignore the fact that he is a good painter. He has designed a number of superior cover pages for Sudha, Prajamatha,

Thushara, Karmaveera, Mayura weekly and monthly magazines which gave much attraction to them in the market. Mother and child, Horse and the Lady, Labour Women are some the examples for his



paintings in water colour media. His special exhibition on the issue of the Tragedy of Illicit Liquor is a remarkable one. All these works expose the life of common people and revels the passion of the artist for the common people. The Red, Block and Green colours are majorly used by him to express the feelings and the big shining eyes, facial expression and special composition altogether give special effect and make the paintings lively. No doubt, he is attractive in line works but he is more lively and more effective when he works with colours, either in oil media or water colour which makes no difference to him.

Mr. Hubliker has greater love and affection towards paintings though he is a famous cartoonist. He says 'As a cartoonist I am a slave where I can not express my tastes and insight freely. But in painting I am totally free to expose my mind to its ultimate. Still painting is not for all, as the symbolic representation and the inner meaning in it cannot reach people of all classes easily. But cartoon can reach even a common man easily creating awareness'. According to him 'painting is for self satisfaction and cartoons for livelihood'.

**The pity of cartoons and papers:**

According to Hublikar 'cartoon is a powerful media to reset the social disorders by creating social

awareness. As this truth is ignored by many of the cartoonists, the creative power, inner potentialities and the inner voice has been disappeared in the present cartoons and hence they appear like cheap jokes. The press media is also responsible for this situation. In some news papers there are 'Executive Editors' other than the editor who have least knowledge regarding the purpose, meaning and the value of cartoons. They are not capable enough to face the charge and effect of cartoon. They just need circulation and existence of the papers rather than it's quality, social responsibility and moral fitness. So they prefer good market rather than a good painting. They respect cheap graphics rather than a good artist. Hence the public feel the morning's newspaper as evening's waste paper'.

**Chief Minister at Mid night:**

Hublikar says 'Cartoons are capable of creating dynamic and unexpected turnings which may be dangerous also at times. Once being disturbed by one of my cartoons, I was taken to a hotel at midnight by a paid troop to murder me. But luckily came alive. In opposite to this in another such occasion Late Sri. Devaraj Urs knocked my door late at night and expressed his happiness and congratulated me for the day's cartoon. Such being the movement of cartoons, cartoonists must be very keen about the clutches of law that they should never caught by it.



**Un/Satisfaction:**

Hublikar is a simple and honest but straight forward person who lived committed to his stand always. With his bold, dynamic and revolutionary cartoons and paintings he struggled against the political prostitute and social injustice stout heartedly. Though served for 45years he gained nothing for himself, except the days Bread and Butter.

Talking about his achievement Hublikar says 'Life means not money at all. I am satisfied as I am remembered and recognized even today by the readers. But the fact that my 45 years of work could not change even a single politician or a single minister, disturbs my sleep at night'.

**Respects and Awards:**

Hublikar has been respected with many awards and positions throughout the nation for his honest and distinguished work.

Award for the best composition in cultural exhibition sponsored by literary association Dharwar in 1958, State Lalitakala academy award for composition "Music" in 1961, State Lalitakala academy award for composition "Mother and Child" in 1966, State

Laliatkala academy award, Mysore Dasara award & Lalit kala Academy Honour in 1962, Award at Mysore Dasara Exhibition for composition in 1972,



Karnataka Govt's. Rajyothsava award in 2002, State media academy's award in 2003, are some examples.

He was a visiting professor to Govt. School of Arts and crafts-Dhavanagere in 1975 and 1982, Vice president of Karnataka kalamela 1980, President of Rhythm Group of Artists drawing in 1981, Chairman of Kala Mahotsava held at art complex Chitrakala parishat-Bangalore in 1984 and so on.

**Good-bye:**

When asked about the possibility of his return to the field Hublikar who is enjoying his retirement life says 'No, I have served for a long time and enjoyed some good days. But, now the field is changed. They would not accept my conditions. I cannot adjust to slavery. Hence no question of returning. I have my own brush and paint to spare my time. Good-bye'.

**R. Shantha Murthy**

Teacher

"Amulya Nivas"

Devarayapattana Main Road, TUMKUR.





ಕರ್ನಾಟಕ ಲಲಿತಕಲಾ ಅಕಾಡೆಮಿ

Karnataka Lalitakala Academy